ಈ ಲೇಖನದ ವಿಷಯಾನುಕ್ರಮಣಿಕೆ


ಮೂಗುತಿಯ ದುರ್ವಾದದ ಖಂಡನೆ 2

ಮೂಗುತಿಯ ಸಂಸ್ಕೃತದ ಹೆಸರುಗಳು 6

ಕಾವ್ಯಗ್ರಂಥಗಳಲ್ಲಿ ಮೂಗುತಿಯ ಉಲ್ಲೇಖ 7

ಸ್ತೋತ್ರಗ್ರಂಥಗಳಲ್ಲಿ ಮೂಗುತಿಯ ಉಲ್ಲೇಖ 10

ಶ್ರೀಮನ್ ಮಧ್ವಶಾಸ್ತ್ರದಲ್ಲಿ ಮೂಗುತಿಯ ಉಲ್ಲೇಖ 12

ತಂತ್ರಶಾಸ್ತ್ರ ಮತ್ತು ಪುರಾಣಗಳಲ್ಲಿ ಉಲ್ಲೇಖ 17

ಮೂಗು ಚುಚ್ಚುವ ಸಂಸ್ಕಾರವಿದೆಯೇ ಎಂಬ ಪ್ರಶ್ನೆಗೆ ಉತ್ತರ 26

## ಮೂಗುತಿಯ ದುರ್ವಾದದ ಖಂಡನೆ

### ಮೂಗುತಿ ಚುಚ್ಚುವದು ಹಿಂದೂಗಳ ಸಂಪ್ರದಾಯಲ್ಲ ಎಂಬ ದುರ್ವಾದದ ಖಂಡನೆ

ಶ್ರೀಯುತ ಹರಿಕೃಷ್ಣ ಕೊಲ್ಹಾರರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ —

---

ನಮಸ್ಕಾರ ಆಚಾರ್ಯರೆ...

ಬನ್ನಂಜೆ ಗೋವಿಂದಾಚಾರ್ಯರು ವಿಜಯ ಕರ್ನಾಟಕ "ಭೋಧಿ ವೃಕ್ಷ" ದಲ್ಲಿ ಹಿಂದು ಸಂಪ್ರದಾಯದಲ್ಲಿ ಸ್ತ್ರೀಯರಿಗೆ ಕಿವಿ ಚುಚ್ಚಿಕೊಳ್ಳುವದು ಮಾತ್ರ ಇದೆ ಅಂತ ಮತ್ತು ಮೂಗು ಚುಚ್ಚಿಸಿಕೊಳ್ಳುವದು ಅದು ಮುಸ್ಲಿಂ ಸಂಪ್ರದಾಯದಿಂದ ಬಂದಿದ್ದು ಅಂತ ತಿಳಿಸಿದ್ದಾರೆ..... ಇದು ನಿಜವೇ ?



## ಉಪದೇಶ ಪಡೆದ ವಿದ್ಯೆ

ಓದುಗರ ಧಾರ್ಮಿಕ, ತಾತ್ತ್ವಿಕ, ಹಾಗೂ ಆಧ್ಯಾತ್ಮಿಕ ಜಿಜ್ಞಾಸೆಗಳಿಗೆ ಹಿರಿಯ ವಿದ್ವಾಂಸರಾದ ಡಾ.ಬನ್ನಂಜೆ ಗೋವಿಂದಾಚಾರ್ಯ ಉತ್ತರಿಸಿದ್ದಾರೆ.

- ಹಿಂದೂ ಸಂಪ್ರದಾಯದ ಪ್ರಕಾರ ಮಹಿಳೆಯರು ಮೂಗು ಚುಚ್ಚಿಸಿಕೊಂಡು ಮೂಗುತಿ ಧರಿಸುತ್ತಾರೆ? ಆ ಆಚರಣೆಯ ಹಿಂದಿರುವ ಮಹತ್ವವೇನು?

ಜನ್ಮಿತಾ | ಮಡಿಕೇರಿ

ಅದು ಮೂಲತಃ ಹಿಂದೂ ಸಂಪ್ರದಾಯವೇ ಅಲ್ಲ. ಮುಸಲ್ಮಾನರಿಂದ ಬಂದ ಸಂಪ್ರದಾಯ. ಕಿವಿ ಚುಚ್ಚುವುದು ಮಾತ್ರ ಹಿಂದುಗಳ ಸಂಪ್ರದಾಯ. ಮೂಗು ಚುಚ್ಚುವುದು ಅಲ್ಲ.

ಧನ್ಯವಾದಗಳು.....

---

ನಾವು ದೇಶದ್ರೋಹದ ಕುರಿತ ಮಾತನಾಡುವಾಗ ಯಾವಾಗಲೂ ಒಂದು ಮಾತನ್ನು ಕೇಳುತ್ತೇವೆ — ಹೊರಗಿನ ಶತ್ರುಗಳಿಗಿಂತ ಒಳಗಿನ ಶತ್ರುಗಳು ಅಪಾಯಕಾರಿ ಎಂದು. ಈ ಮಾತು ಧರ್ಮ ಮತ್ತು ಸಂಸ್ಕೃತಿಯ ವಿಷಯಕ್ಕೂ ಸಹ ಅಕ್ಷರಶಃ ಅನ್ವಯಿಸುತ್ತದೆ.

ಭಗವಾನ್ ಭಗವದ್ಗೀತೆಯಲ್ಲಿ ತಪ್ಪಿದೆ ಎಂದರೆ ಯಾರೂ ಕವಡೆ ಕಾಸಿನ ಕಿಮ್ಮತ್ತೂ ಕೊಡುವದಿಲ್ಲ. ಅದರಿಂದ ಯಾರೂ ಬದಲಾಗುವದಿಲ್ಲ. ಕಾರಣ, ಆತನ ತಲೆಯಲ್ಲಿ ಬುದ್ಧಿ ಎನ್ನುವ ವಸ್ತುವೇ ಇಲ್ಲ ಎನ್ನುವದು ಇಡಿಯ ಕರ್ನಾಟಕದ ಜನತೆಗೆ ತಿಳಿದ ವಿಷಯ.

ಆದರೆ, ಬನ್ನಂಜೆಯಂತಹ ವಿದ್ವಾಂಸರು ತಮ್ಮ ತಲೆಗೆ ತೋಚಿದ್ದನ್ನು ಶಾಸ್ತ್ರ ಎಂದು ಹೇಳುತ್ತ ಹೊರಟರೆ ಜನಸಾಮಾನ್ಯರು ಕಂಗೆಡುತ್ತಾರೆ. ಸಂಶಯಕ್ಕೀಡಾಗುತ್ತಾರೆ. ಜನರನ್ನು ದಾರಿ ತಪ್ಪಿಸುವ ಬನ್ನಂಜೆಯ ಅಂತಹ ಅನೇಕ ದುರ್ವಾದಗಳಲ್ಲಿ ಮೂಗುತಿಯನ್ನು ಧರಿಸುವದು ಹಿಂದೂಗಳ ಸಂಪ್ರದಾಯವಲ್ಲ, ಮುಸಲ್ಮಾನರಿಂದ ಬಂದದ್ದು ಎಂಬ ದುರ್ವಾದವೂ ಒಂದು.

ಇದೇ ಬನ್ನಂಜೆ ಹಿಂದೆ ಹೆಣ್ಣುಮಕ್ಕಳು ಕುಪ್ಪಸ ತೊಡುವದು ಪ್ರಾಚೀನ ಸಂಪ್ರದಾಯವಲ್ಲ ಎಂದು ದುರ್ವಾದವನ್ನು ಹುಟ್ಟು ಹಾಕಿದ್ದರು. ಅವರ ಬಳಿಯೇ ಕೆಲವು ದಿವಸ ಓದಿದ್ದ ಉಡುಪಿಯ

ರಾಮನಾಥಾಚಾರ್ಯರು ಅದನ್ನು ತೀವ್ರವಾಗಿ ಖಂಡಿಸಿದ್ದರು. ಶಾಸ್ತ್ರವಿರುದ್ಧವಾಗಿ ತಲೆಗೆ ತೋಚಿದ್ದನ್ನೆಲ್ಲ ಮಾತನಾಡಿದರೆ ಶಿಷ್ಯನಿಂದಲೇ ಖಂಡನೆಯಾಗುತ್ತದೆ ಎನ್ನುವದು ನಾವು ಬನ್ನಂಜೆಯನ್ನು ನೋಡಿ ಕಲಿಯಬೇಕಾದ ಪಾಠ.

ಶಾಸ್ತ್ರಕ್ಕೆ ಅಸಮ್ಮತವಾದ ವಿಷಯವನ್ನು, ಸಂಸ್ಕೃತಿಗೆ ಘಾತವುಂಟಾಗುವ ವಿಷಯವನ್ನು ಪ್ರತಿಪಾದಿಸಿದರೆ, ತಾನು ವಿದ್ಯಾವಂತ ಎಂಬ ಅಹಂಕಾರದಲ್ಲಿ ತಲೆಗೆ ತೋಚಿದ್ದನ್ನೆಲ್ಲ ಶಾಸ್ತ್ರ ಎಂದು ಹೇಳಿದರೆ ಗಳಿಸಿದ್ದ ಗೌರವವೆಲ್ಲ ಮಣ್ಣುಪಾಲಾಗುತ್ತದೆ ಎನ್ನುವದಕ್ಕೆ ಬನ್ನಂಜೆ ನಮ್ಮೆದುರಿಗಿನ ಜೀವಂತ ದೃಷ್ಟಾಂತ.

ಇನ್ನು ಬನ್ನಂಜೆ ಹೇಳುವ ಒಳ್ಳೆಯ ವಿಷಯವಾಗಲೀ, ಕೆಟ್ಟದ್ದಾಗಲೀ ಅವರ ಸ್ವಂತದ್ದಲ್ಲ ಎನ್ನುವದಕ್ಕೆ ಇದೂ ಒಂದು ನಿದರ್ಶನ. ಮೂಗುತಿಯ ವಿಷಯವಾಗಿ ರಾಜಾಸ್ಥಾನ ಮತ್ತು ಮಹಾರಾಷ್ಟ್ರದ ಇಬ್ಬರು ಆಧುನಿಕ ಸಂಶೋಧಕರು ಹೇಳಿದ್ದನ್ನೇ ಉರು ಹೊಡೆದು ಬನ್ನಂಜೆ ಇಲ್ಲಿ ಹೇಳಿದ್ದಾರೆ.

ಮೂಗನ್ನು ಚುಚ್ಚಿಸಿಕೊಂಡು ಮೂಗುತಿಯನ್ನು ಧರಿಸುವದು ಶ್ರೇಷ್ಠವಾದ ವೈದಿಕ ಸಂಪ್ರದಾಯ. ಇದಕ್ಕೆ ಆಧಾರಗಳನ್ನು ನೀಡುತ್ತೇನೆ, ಗಮನಿಸಿ.

## ಮೂಗುತಿಯ ಸಂಸ್ಕೃತದ ಹೆಸರುಗಳು

ಸಂಸ್ಕೃತದಲ್ಲಿ ಮೂಗುತಿಯನ್ನು ನಾಸಾಭೂಷಣ, ನಾಸಾವಿಭೂಷಣ, ನಾಸಾಮಣಿ, ನಾಸಾಮೌಕ್ತಿಕ ಎಂದೆಲ್ಲ ಕರೆಯುತ್ತಾರೆ. ಮುತ್ತಿನಿಂದ ನಿರ್ಮಾಣ ಮಾಡುವ ಮೂಗುತಿಯ ಉಲ್ಲೇಖ ಪ್ರಾಚೀನ ಗ್ರಂಥಗಳಲ್ಲಿ ಹೆಚ್ಚು ದೊರೆಯುತ್ತದೆ. ಮುತ್ತಿನ ಮೂಗುತಿ ಎಂದು ಕನ್ನಡದಲ್ಲಿಯೂ ಪ್ರಸಿದ್ಧ.

## ಕಾವ್ಯಗ್ರಂಥಗಳಲ್ಲಿ ಮೂಗುತಿಯ ಉಲ್ಲೇಖ

ಬನ್ನಂಜೆಗೆ ಅತೀಪ್ರಿಯನಾದ ಗ್ರಂಥಕಾರ, ವಲ್ಲಭದೇವ. ಹೆಣ್ಣು-ಗಂಡುಗಳ ಶೃಂಗಾರವನ್ನು ವರ್ಣನೆ ಮಾಡಿದ ರಸಿಕಕವಿ. ಅವನು ತನ್ನ ಗ್ರಂಥದಲ್ಲಿ ಹೆಣ್ಣಿನ ಹದಿನಾರು ಶೃಂಗಾರಗಳನ್ನು ವರ್ಣಿಸಬೇಕಾದರೆ ಏಳನೆಯ ಶೃಂಗಾರಪದಾರ್ಥವನ್ನಾಗಿ ನಾಸಾಮೌಕ್ತಿಕವನ್ನಾಗಿ ಉಲ್ಲೇಖಿಸಿದ್ದಾನೆ.

**ಪೂರ್ವಂ ಮರ್ದನ-ಚೀರ-ಹಾರ-ತಿಲಕಂ**
**ನೇತ್ರಾಂಜನಂ ಕುಂಡಲಂ**
**“ನಾಸಾಮೌಕ್ತಿಕ”-ಪುಷ್ಪಮಾಲಕರಣಂ**
**(ಕೇಶಪಾಶರಚನಂ) ಶೃಂಗಾರಕೃನ್ನೂಪುರಮ್ ।**
**ಅಂಗೇ ಚಂದನಲೇಪ-ಕಂಚುಕ-ಮಣಿ-**
**ಕ್ಷುದ್ರಾವಲೀ-ಘಂಟಿಕಾ**
**ತಾಂಬೂಲಂ ಕರಕಂಕಣಂ ಚತುರತಾ**
**ಶೃಂಗಾರಕಾಃ ಷೋಡಶ ॥**

ರಸಗಂಗಾಧರದಲ್ಲಿ ಜಗನ್ನಾಥಪಂಡಿತ ರೂಪಕಾಲಂಕಾರದ ಏಳನೆಯ ಲಕ್ಷಣವನ್ನು

ಹೇಳುವಾಗ —
**“ಮೌಕ್ತಿಕಾಲಂಕೃತಿಭೇದಗಣನಾಯಾಂ ಏಕಂ ನಾಸಾಮೌಕ್ತಿಕಮಿವ”** ಎಂದು ಮೂಗುತಿಯನ್ನು ಉಲ್ಲೇಖಿಸಿದ್ದಾನೆ.

ಕಾಳಿದಾಸ ಕುಮಾರಸಂಭವದಲ್ಲಿ ಪಾರ್ವತಿಯ ವರ್ಣನೆ ಮಾಡುವಾಗ ಮೂಗುತಿಯನ್ನು ಉಲ್ಲೇಖಿಸಿದ್ದಾನೆ. ಅನೇಕ ಕಾವ್ಯಗಳಲ್ಲಿ ಮೂಗುತಿಯ ಉಲ್ಲೇಖ ದೊರೆಯುತ್ತದೆ.

ಕಾವ್ಯಗಳಲ್ಲಿದ್ದರೇನಂತೆ. ಬನ್ನಂಜೆ ಹೇಳುತ್ತಿರುವದು ಅದು ಮುಸಲ್ಮಾನರಿಂದ ಬಂದ ಸಂಪ್ರದಾಯ ಎಂದು. ಕಾವ್ಯಶಾಸ್ತ್ರದ ವಚನಗಳು ಪ್ರಮಾಣವಾಗುವದಿಲ್ಲ ಎಂದು ನೀವು ಕೇಳಬಹುದು, ಅದಕ್ಕೆ ಉತ್ತರ — ಜಗನ್ನಾಥಪಂಡಿತ ಮುಂತಾದವರು ಮುಸಲ್ಮಾನರ ಪ್ರಭಾವ ನಮ್ಮ ದೇಶದಲ್ಲಾದ ಮೇಲೆ ಹುಟ್ಟಿದವರು. ಆದರೆ, ವಲ್ಲಭದೇವ ಕಾಳಿದಾಸ ಮುಂತಾದವರು ಮುಸಲ್ಮಾನರು ಕಾಲಿಡುವದಕ್ಕಿಂತ ಮುಂಚೆಯೇ ಆಗಿಹೋದ

ಕವಿಗಳು. ಅವರ ಕಾವ್ಯದಲ್ಲಿ ಮೂಗುತಿಯ ಉಲ್ಲೇಖ ಹೇಗೆ ಬರಲು ಸಾಧ್ಯ?

ಇನ್ನು ಮೂಗುತಿಯ ಮುಸಲ್ಮಾನರಿಂದ ಪ್ರಭಾವಿತವಾಗಿದ್ದರೆ ಅದು ಜನಸಾಮಾನ್ಯರಲ್ಲಿ ಮಾತ್ರ ಉಳಿಯಬೇಕಾಗಿತ್ತು. ದೇವತೆಗಳನ್ನು ವರ್ಣನೆ ಮಾಡಬೇಕಾದರೆ ಸಹಿತ ಮೂಗುತಿ ಸಹಿತವಾಗಿಯೇ ನಮ್ಮ ಪ್ರಾಚೀನರು ಸ್ತೋತ್ರ ಮಾಡುತ್ತಾರೆ.

ಆಧಾರಗಳನ್ನು ನೀಡುತ್ತೇನೆ, ಗಮನಿಸಿ.

## ಸ್ತೋತ್ರಗ್ರಂಥಗಳಲ್ಲಿ ಮೂಗುತಿಯ ಉಲ್ಲೇಖ

ಮೂಗುತಿಯ ಧಾರಣೆ ಒಟ್ಟಾರೆ ಹಿಂದೂಗಳ ಸಂಪ್ರದಾಯವಲ್ಲ ಎಂದು ಬನ್ನಂಜೆ ಹೇಳಿರುವದರಿಂದ ಎಲ್ಲ ಹಿಂದೂಗಳ ವಚನವನ್ನೂ ಉಲ್ಲೇಖಿಸುತ್ತೇನೆ.

ಶಂಕರರ ಸೌಂದರ್ಯಲಹರಿಯಲ್ಲೂ "ಮುಕ್ತಾಮಣಿಯನ್ನು ಹೊತ್ತ ಮೂಗು" ಎಂದು ಮೂಗುತಿಯ ಉಲ್ಲೇಖವಿದೆ —

ಅಸೌ ನಾಸಾವಂಶಸ್ತುಹಿನಗಿರಿ-
ವಂಶಧ್ವಜಪಟೀ
ತ್ವದೀಯೋ ನೇದೀಯಃ ಫಲತು
ಫಲಮಸ್ಮಾಕಮುಚಿತಮ್ ।
ವಹಂತ್ಯಂತರ್ಮುಕ್ತಾಃ ಶಿಶಿರಕರ-
ನಿಃಶ್ವಾಸಗಲಿತಂ
ಸಮೃದ್ಧ್ಯಾ ಯತ್ತಾಸಾಂ ಬಹಿರಪಿ ಚ
**"ಮುಕ್ತಾಮಣಿಧರಃ"** ॥

ಲಲಿತಾಸಹಸ್ರನಾಮದಲ್ಲಿ ಗೌರೀದೇವಿಯ ಮೂಗು ಮತ್ತು ಮೂಗುಬಟ್ಟನ್ನು ವರ್ಣನೆ ಮಾಡಲಾಗಿದೆ —

ನವಚಂಪಕಪುಷ್ಪಾಭ-
ನಾಸಾದಂಡವಿರಾಜಿತಾ ।
ತಾರಾಕಾಂತಿತಿರಸ್ಕಾರಿ
**“ನಾಸಾಭರಣಭಾಸುರಾ”** || 7 ||

“ನಕ್ಷತ್ರದ ಕಾಂತಿಯನ್ನು ಮೀರುವ ಮೂಗುಬಟ್ಟಿನಿಂದ ಶೋಭಿತವಾದ, ಆಗ ತಾನೇ ಬಿರಿದ ಸಂಪಿಗೆಯಂತಹ ಮೂಗುಳ್ಳ ಲಲಿತಾದೇವಿ”

ಲಲಿತಾಸ್ತವರತ್ನದಲ್ಲಿಯೂ ನಾಸಾಮಣಿಯ ಉಲ್ಲೇಖವಿದೆ —

**ಸರಸಿಜಸಹಯುಧ್ವದೃಶಾ**
**ಶಂಪಾಲತಿಕಾಸನಾಭಿವಿಗ್ರಹಯಾ ।**
**ಭಾಸಾ ಕಯಾಪಿ ಚೇತೋ**
**“ನಾಸಾಮಣಿಶೋಭಿವದನಯಾ” ಭರಿತಮ್ ‖**
188‖

“ಮೂಗುತಿಯಿಂದ ಇಡಿಯ ಮುಖ ಶೋಭಾಯಮಾನವಾಗಿದೆ”

## ಶ್ರೀಮನ್ ಮಧ್ವಶಾಸ್ತ್ರದಲ್ಲಿ ಮೂಗುತಿಯ ಉಲ್ಲೇಖ

ಶ್ರೀ ಶ್ರೀಪಾದರಾಜರು ಸರಸ್ವತೀದೇವಿಯನ್ನು ವರ್ಣನೆ ಮಾಡುವಾಗ ಮೂಗುತಿಯನ್ನು ಎರಡನೆಯ ಚರಣದಲ್ಲಿ ಉಲ್ಲೇಖಿಸಿದ್ದಾರೆ —

ನಲಿದಾಡೆ ಎನ್ನ ನಾಲಿಗೆ ಮ್ಯಾಲೆ ಶಾರದಾದೇವಿ
ಕುಣಿದಾಡೆ ಎನ್ನ ನಾಲಿಗೆ ಮ್ಯಾಲೆ ||ಪ||

**ನಸುನಗೆ ಮುಖವು "ನಾಸಾಭರಣ" ಎಸೆವ ಕಪೋಲ**
**ಹೊಸ ಮುತ್ತಿನ ಚಳ ತುಂಬಿಟ್ಟ ಶ್ರವಣ ತಿಲಕವು**
**ಹಸನಶಶಿ ಸೂರ್ಯರ ಆಭರಣ ಶೋಭಿತಳೆ**
**ಕುಸುಮ ಮುಡಿದ ಮೂರ್ಧಜ ಉಳ್ಳವಳೆ ||೨||**

ಶ್ರೀ ವಾದಿರಾಜಗುರುಸಾರ್ವಭೌಮರು ತಮ್ಮ ಲಕ್ಷ್ಮೀಗದ್ಯದಲ್ಲಿ **"ಲಪನಲಾವಣ್ಯ-ದುಗ್ಧಾಂಬುಧೀಬುದ್ಬುದೀಭೂತನಾಸಾಮೌಕ್ತಿಕಾ"** ಎಂದು ಲಕ್ಷ್ಮೀದೇವಿಯ ಮೂಗಿನಲ್ಲಿ ಮೂಗುತಿ ಇದೆ ಎಂದು ವರ್ಣಿಸಿದ್ದಾರೆ.

ತಮ್ಮ ದುರ್ಗಾಸ್ತವದಲ್ಲಿ ಸಹಿತ ಶ್ರೀ ವಾದಿರಾಜರು ದುರ್ಗೆಯನ್ನು ನಾಸಾಮಣಿಭೂಷಿತಳನ್ನಾಗಿಯೇ ಸ್ತೋತ್ರ ಮಾಡುತ್ತಾರೆ —

**ವಿಚಿತ್ರಚೂಡಾಮಣಿನಾ ರತ್ನೋದ್ಯತ್ತಿಲಕೇನ ಚ**
**“ಅನರ್ಘನಾಸಾಮಣಿನಾ”**
**ಶೋಭಿತಾಽಽಸ್ಯಸರೋರುಹಾ ॥**

“ಬೆಲೆಕಟ್ಟಲು ಸಾಧ್ಯವಿಲ್ಲದಷ್ಟು ಅಮೂಲ್ಯವಾದ ಮೂಗುತಿಯಿಂದ ಶೋಭಿತಳಾದ ದುರ್ಗಾದೇವಿ”

ಅವರ ಲಕ್ಷ್ಮ್ಯಾರ್ಯವೃತ್ತಸ್ತೋತ್ರದಲ್ಲಿಯೂ ಮೂಗುತಿಯ ಉಲ್ಲೇಖ ಬಂದಿದೆ —

**ಕುಂಡಲ-ರತ್ನ-ತಿಲಕ-“ಸನ್ನಾಸಾಮಣಿ”-ಕಂಠಸೂತ್ರಹಾರಧರಾ ।**
**ಅಂಗದ-ಕಂಕಣ-ಕಾಂಚೀ-ಕಂಚುಕ-ಪೀತವಸನ-ರಶನಾಭಾ ॥**

ರುಗ್ಮಿಣೀಶವಿಜಯದಲ್ಲಂತೂ ಮೂಗುತಿಯನ್ನು ಮುತ್ತಿನಿಂದಲೇ ಮಾಡಿರಬೇಕು, ಅದರ ಪರಿಮಾಣ

ಎಷ್ಟಿರಬೇಕು ಮುಂತಾದ ವಿವರವನ್ನು ಸೊಗಸಾದ ವಿವರಣೆಯಿಂದ ತಿಳಿಸುತ್ತಾರೆ ಶ್ರೀ ರಾಜರು — (19ನೆಯ ಸರ್ಗದ ಮೂರನೆಯ ಶ್ಲೋಕ)

**ಮುಕ್ತಾತ್ಮಕೋऽಪಿ ಮೃದುಲೋಷ್ಠಪುಟಾನುಷಕ್ತೋ**
**ನಿತ್ಯಂ ಯದುಲ್ಲಸದಪಾಂಗಶರೇಣ ಭಿನ್ನಃ ।**
**"ನಾಸಾವಿಭೂಷಣಮಣಿಃ" ಪರಿಲಂಬತೇऽಸ್ಯಾಃ**
**ದೇವ್ಯಾಃ ಕಿಮಚ್ಯುತವಶೀಕರಣೇ ಪ್ರಯಾಸಃ ॥**

ತಮ್ಮ ಲಕ್ಷ್ಮೀಶೋಭಾನೆಯಲ್ಲಿಯೂ ಶ್ರೀ ರಾಜರು ನಿತ್ಯಳಾದ ಲಕ್ಷ್ಮೀದೇವಿಯನ್ನು ಸ್ತೋತ್ರ ಮಾಡುವಾಗ ಮೂಗುತಿಯನ್ನು ಮರೆಯುವದಿಲ್ಲ —

**"ಶಶಿಬಿಂಬದಂತೆಸೆವ ಮೂಗುತಿಮಣಿಯ ಮಹಲಕ್ಷ್ಮಿ"** ಎಂದು ಲಕ್ಷ್ಮೀದೇವಿಯ ಮೂಗುತಿ ಚಂದ್ರನಷ್ಟು ಕಾಂತಿಯುಕ್ತವಾದದ್ದು ಎಂದು ವರ್ಣಿಸುತ್ತಾರೆ.

ಶ್ರೀ ಪುರಂದರದಾಸರು ತಮ್ಮ "ಭಂಗಾರವಿಡಬಾರದೇ" ಎಂಬ ಪ್ರಸಿದ್ಧಕೃತಿಯಲ್ಲಿ ಮೂಗುತಿಯ ಧಾರಣೆ ತವರು ಮನೆಯ ಉನ್ನತಿಗೆ ಕಾರಣ ಎಂಬ ಸುಳಿವನ್ನು ನೀಡುತ್ತಾರೆ —

**“ಹೆತ್ತವರ ಕುಲಕೆ ಕುಂದು ಬಾರದ ಹಾಗೆ ಮುತ್ತಿನ ಮೂಗುತಿಯಿಡೆ”** ಎಂದು.

ಶ್ರೀ ವಿಜಯದಾಸರು ತಮ್ಮ “ಅಬ್ಜಪಾಣಿ ಹರಿರಾಣಿ” ಎಂಬ ಹಾಡಿನಲ್ಲಿ ಲಕ್ಷ್ಮೀದೇವಿಯ ಮುತ್ತಿನ ಮೂಗುತಿ ಪದಕದಂತಿದೆ ಎಂದು ವರ್ಣಿಸಿದ್ದಾರೆ —

**ಪೊಳೆವ ಕಂಚುಕಾ “ನಾಸಿಕಾಮಣಿಪದಕಾ”**
**ಥಳಥಳಿಸುವ ಅನೇಕಾ ಸೆಲೆಭೂಷಣವಿಟ್ಟು**
**ಕಿಲಿಕಿಲಿ ನಗುವ ಕುಂಡಲ ಕೇಶಪಾಶದ**
**ಸುಲಭ ಜನನಿ ನಿಶ್ಚಲವಾಗಿ ವಿಜಯವಿಠ್ಠಲನ**
**ನಾಮಾಮೃತ ಮೆಲಿಸೋ ಮಾತನು ಸಲಿಸೋ**

ಹೀಗೆ ದಾಸಸಾಹಿತ್ಯದಲ್ಲಿ ಮೂಗುತಿಯ ಉಲ್ಲೇಖ ವಿಪುಲವಾಗಿ ದೊರೆಯುತ್ತದೆ.

ಆದರೆ, ಜಗತ್ತಿನಲ್ಲಿ ತಾನೊಬ್ಬನೇ ಸರ್ವಜ್ಞ ಎಂದು ಬೀಗುವ ಬನ್ನಂಜೆ ಮತ್ತು ಅವರ ಬಡಾಯಿಗಳನ್ನೆಲ್ಲ ನಂಬುವ ಅವರ ಶಿಷ್ಯರು ಶ್ರೀ ವಾದಿರಾಜರ ಮತ್ತು ದಾಸಸಾಹಿತ್ಯದ ಮಾತಿಗೆ ಕವಡೆ ಕಾಸಿನ ಕಿಮ್ಮತ್ತನ್ನೂ ನೀಡುವದಿಲ್ಲ. ವಾದಿರಾಜರು ಮುಂತಾದ ಎಲ್ಲ ಜ್ಞಾನಿಗಳೂ ತಿರುಪತಿಯ

ಶ್ರೀನಿವಾಸನನ್ನು ಅನನ್ಯವಾಗಿ ಭಜಿಸಿದವರು. ಶ್ರೀನಿವಾಸಕಲ್ಯಾಣದ ಪ್ರಸಂಗವನ್ನು ಹಾಡಿ ಹೊಗಳಿದವರು. ಆದರೆ ಬನ್ನಂಜೆ ಮತ್ತು ಅವರ ಅನುಯಾಯಿಗಳು ಶ್ರೀನಿವಾಸಕಲ್ಯಾಣ ನಡೆದೇ ಇಲ್ಲ ಎಂದು ವಾದಿಸುತ್ತ ಕೂಡುತ್ತಾರೆ. (ನನ್ನ ಲೇಖನದಲ್ಲಿ ಈಗಾಗಲೇ ಈ ದುರ್ವಾದವನ್ನು ಖಂಡಿಸಿಯಾಗಿದೆ) ವಾದಿರಾಜರು ಮುಂತಾದವರೆಲ್ಲ ಮುಸಲ್ಮಾನರ ನಂತರ ಬಂದವರು. ಹೀಗಾಗಿ ಮುಸಲ್ಮಾನರ ಪ್ರಭಾವ ಇವರ ಮೇಲಾಗಿದೆ ಎಂದು ಹೇಳಲೂ ಹಿಂಜರಿಯದ ತಂಡದವರು ಬನ್ನಂಜೆಯ ಗುಂಪಿನವರು.

ಟೀಕಾಕೃತ್ಪಾದರಿಗೆ ಸರಿಯಾದ ಸರ್ವಮೂಲಪಾಠವೇ ದೊರೆತಿಲ್ಲ, ಬನ್ನಂಜೆಗೇ ಅದು ದೊರೆತಿರುವದು ಎಂದು ಭ್ರಾಂತರಾಗಿರುವ ಜನರಿಂದ ಇನ್ನೇನನ್ನು ತಾನೆ ನಿರೀಕ್ಷಿಸಲು ಸಾಧ್ಯ?

ಹೀಗಾಗಿ ಮತ್ತಷ್ಟು ಗಟ್ಟಿಯಾದ ಪ್ರಮಾಣಗಳನ್ನು ನೀಡುತ್ತೇನೆ.

## ತಂತ್ರಶಾಸ್ತ್ರ ಮತ್ತು ಪುರಾಣಗಳಲ್ಲಿ ಉಲ್ಲೇಖ

ತಂತ್ರಶಾಸ್ತ್ರಗಳಲ್ಲಿ ಸ್ತ್ರೀದೇವತೆಗಳ ಪೂಜೆಯನ್ನು ಮಾಡಬೇಕಾದರೆ 64 ಉಪಚಾರಗಳನ್ನು ಸಮರ್ಪಿಸಬೇಕು ಎಂದು ತಿಳಿಸಲಾಗಿದೆ. ಅದರಲ್ಲಿ 23ನೆಯ ಉಪಚಾರವನ್ನಾಗಿ ನಾಸಾಭರಣವನ್ನು ಯಾಮಲತಂತ್ರದಲ್ಲಿ ಉಲ್ಲೇಖಿಸಲಾಗಿದೆ.

ಹಾಗೆಯೇ ಪಾರ್ವತೀದೇವಿಯನ್ನು ವರ್ಣಿಸುವಾಗ ನಾಸಿಕಾ-ಭೂಷಣ-ಭೂಷಿತಳನ್ನಾಗಿಯೇ ಉಲ್ಲೇಖಿಸುತ್ತಾರೆ —

**“ಶಾಂಭವೀಮುದಾರಶೀಲಾಂ ಶಿವಾಂ ಶುಂಭವಿಭಂಜನೀಂ ಶೂಲವಿಧೃತಾಮ್ । ನಮಸ್ಕೃತದೇವತಾವಳಿಸಹಿತಾಂ “ನಾಸಿಕಾಭೂಷಣ”ಭೂಷಿತಾಮ್”** ಎಂದು.

ದೇವರಿಗೆ ಹದಿನಾರು ಉಪಚಾರಗಳನ್ನು ಸಲ್ಲಿಸುವಂತೆ ದೇವಿಗೆ 64 ಉಪಚಾರಗಳನ್ನು ಸಲ್ಲಿಸುವ ಕ್ರಮವನ್ನೂ ತಂತ್ರಶಾಸ್ತ್ರ ತಿಳಿಸುತ್ತದೆ. ಅದರಲ್ಲಿ 23ನೆಯ ಉಪಚಾರವನ್ನಾಗಿ

ನಾಸಾಭರಣವನ್ನು ಮೂಗುತಿಯನ್ನು ಶಾಸ್ತ್ರ ತಿಳಿಸುತ್ತದೆ.

( ಇವು ಶಬ್ದಕಲ್ಪದ್ರುಮದಲ್ಲಿ ಉಲ್ಲೇಖಿಸಲ್ಪಟ್ಟ ತಂತ್ರಶಾಸ್ತ್ರದ ಶ್ಲೋಕಗಳು)

ತಂತ್ರಶಾಸ್ತ್ರಗಳಷ್ಟೇ ಅಲ್ಲ ಪುರಾಣಗಳಲ್ಲಿಯೂ ಸಹ ಮೂಗುತಿಯ ವಿಪುಲವಾದ ಉಲ್ಲೇಖಗಳಿವೆ.

ಪದ್ಮಪುರಾಣದಲ್ಲಿ[1] ಭಗವದ್ಗೀತೆಯ ಹತ್ತನೆಯ ಅಧ್ಯಾಯದ ಮಾಹಾತ್ಮ್ಯವನ್ನು ಹೇಳುವ ಸಂದರ್ಭದಲ್ಲಿ **"ನಾಸಾಮುಕ್ತಾಫಲಜ್ಯೋತ್ಸ್ನಾಚುಂಬಿತಸ್ಮಿತದೀಧಿತಿಃ"** "ಆ ಹೆಣ್ಣಿನ ಮೂಗುತಿಯಲ್ಲಿನ ಮುತ್ತಿನ ಕಾಂತಿ ಅವಳ ನಗುವನ್ನು ಚುಂಬಿಸಿತ್ತು" ಎಂಬ ರಮಣೀಯವಾದ ವರ್ಣನೆಯಿದೆ.

ಪದ್ಮಪುರಾಣದ ಪಾತಾಳಖಂಡದ 114ನೆಯ ಅಧ್ಯಾಯದಲ್ಲಿ ಇನ್ನೂ ಪ್ರಬಲವಾದ ಪ್ರಮಾಣ ದೊರೆಯುತ್ತದೆ.

---

[1] ಪದ್ಮಪುರಾಣ, ಉತ್ತರಖಂಡ,184ನೇ ಅಧ್ಯಾಯ, 60ನೆಯ ಶ್ಲೋಕ.

ಪಾರ್ವತೀದೇವಿ ತವರುಮನೆಯಿಂದ ತಂದ ಮೂಗುತಿನ್ನಷ್ಟೇ ಧರಿಸಿದ್ದಲ್ಲ, ರುದ್ರದೇವರು ತಮ್ಮ ಮನೆಯಲ್ಲಿಯೇ ಪಾರ್ವತಿಗಾಗಿ (ವಿಶ್ವಕರ್ಮನಿಂದ) ಮೂಗುತಿಯನ್ನು ಮಾಡಿಸಿದ್ದರು ಎಂಬ ಉಲ್ಲೇಖವಿದೆ —

> **ನಾಸಾಭೂಷಣಮೇತತ್ತೇ**
> **ಪಶ್ಯಾಮಿ ಸಮದಾತ್ ತತಃ ।**
> **ಇದಂ ಹಿ ಧ್ರಿಯತಾಂ ಮುಕ್ತಾ-**
> **ಫಲಂ ಮಮ ತವ ಪ್ರಿಯಮ್ ॥**

“ಮುತ್ತಿನಿಂದ ಮಾಡಿಸಿದ ಈ ಮೂಗುತಿಯನ್ನು ತೆಗೆದುಕೋ, ನನಗೂ ಪ್ರಿಯವಾದ ನಿನಗೂ ಪ್ರಿಯವಾದ ಈ ಮುತ್ತಿನ ಮೂಗುತಿಯನ್ನು ಧಾರಣೆ ಮಾಡು” ಎಂದು ರುದ್ರದೇವರು ಹೇಳುತ್ತಾರೆ. ಆಗ ಆ ಅನರ್ಘವಾದ ಮುತ್ತಿನ ಮೂಗುಬಟ್ಟನ್ನು ಪಾರ್ವತೀದೇವಿ ಧಾರಣೆ ಮಾಡುತ್ತ — “ಅಹೋ ತ್ವನ್ಮಂದಿರಂ ಶಂಭೋ ಸರ್ವವಸ್ತುಸಮೃದ್ಧಿಮತ್” ಎಂದು ರುದ್ರದೇವರ ಕೈಲಾಸ

ಸಕಲಪದಾರ್ಥಗಳಿಂದ ಸಮೃದ್ಧವಾದದ್ದು ಎನ್ನುತ್ತಾಳೆ.

ಇದೇ ವಿಷಯ ನಾರದಪುರಾಣದ ಪೂರ್ವಾರ್ಧದ ಎಪ್ಪತ್ತೊಂಭತ್ತನೆಯ ಅಧ್ಯಾಯದಲ್ಲಿಯೂ ಉಲ್ಲಿಖಿತವಾಗಿದೆ —

**ನಾಸಾಭೂಷಣಮೇತತ್ತೇ
ಪಶ್ಯಾಮಿ ಸಮದಾತ್ ತತಃ ।
ತತಃ ಪ್ರಾಹ ಶಿವಾ ಶಂಭುಂ
ಸ್ಮಿತ್ವಾ ಪರ್ವತನಂದಿನೀ ।
ಅಹೋ ತ್ವನ್ಮಂದಿರಂ ಶಂಭೋ
ಸರ್ವವಸ್ತುಸಮೃದ್ಧಿಮತ್ ।**

ಬ್ರಹ್ಮಾಂಡಪುರಾಣದಲ್ಲಿಯೂ ನಾಸಾಭರಣದ ಉಲ್ಲೇಖವಿದೆ. ರುದ್ರದೇವರು ಪರಮಾತ್ಮನ ಮೋಹಿನೀರೂಪವನ್ನು ನೋಡಲಿಚ್ಛೆಸಿದಾಗ ಪರಮಾತ್ಮ ಮೋಹಿನಿಯಾಗಿ ಅವರ ಮುಂದೆ ಪ್ರಾದುರ್ಭೂತನಾಗುತ್ತಾನೆ. ಆ ಮೋಹಿನಿಯ ರೂಪದ ಭಗವಂತನ ಮೂಗಿನಲ್ಲಿ ಮುತ್ತಿನ ಮೂಗುತಿಯಿತ್ತು ಎಂದು ಶ್ರೀ ವೇದವ್ಯಾಸದೇವರು

ಬ್ರಹ್ಮಾಂಡಪುರಾಣದಲ್ಲಿ (3-10-65) ದಾಖಲಿಸಿದ್ದಾರೆ.

**ಕುಂದಕುಡ್ಮಲಸಚ್ಛಾಯೈಃ
ದಂತೈಃ ದರ್ಶಿತಚಂದ್ರಿಕಾ ।
ಸ್ಥೂಲಮೌಕ್ತಿಕಸನ್ನದ್ಧ-
"ನಾಸಾಭರಣಭಾಸುರಾ" ಎಂದು.**

ಬನ್ನಂಜೆಯ ಹರಟೆಯಂತೆ ಪರಮಾತ್ಮನೂ ಮುಸಲ್ಮಾನರಿಂದ ಪ್ರಭಾವಿತನಾಗಿ ಮೋಹಿನೀರೂಪದಲ್ಲಿ ಮೂಗುತಿಯನ್ನು ಧರಿಸಿದ್ದ ಎಂದು ಒಪ್ಪಬೇಕೇ?

ಪಾರ್ವತೀದೇವಿ ರುದ್ರದೇವರ ಆಜ್ಞೆಯಂತೆ ತನ್ನ ಒಂದು ಪ್ರತಿಬಿಂಬವನ್ನು ನಿರ್ಮಾಣ ಮಾಡುತ್ತಾಳೆ. ಆ ಪ್ರತಿಬಿಂಬದಲ್ಲಿಯೂ ಅನುಪಮವಾದ ಮೂಗುತಿಯಿತ್ತು ಎಂದು ಅದೇ ಬ್ರಹ್ಮಾಂಡಪುರಾಣದಲ್ಲಿ ಶ್ರೀ ವೇದವ್ಯಾಸದೇವರು ತಿಳಿಸುತ್ತಾರೆ. (3-39-89)

**"ಔಪಮ್ಯರಹಿತೋದಾರ-
ನಾಸಾಮಣಿಮನೋಹರಃ ।**

**ವಿಲಸತ್ತಿಲಪುಷ್ಪಶ್ರೀ
ವಿಮಲೋನ್ನತನಾಸಿಕಃ[2]”**

ಪುರಾಣಗಳಲ್ಲಿ ಉಲ್ಲೇಖವಿದೆ, ಸರಿ. ವೇದಗಳಲ್ಲಿ ಉಲ್ಲೇಖವಿದೆಯೇ? ಅವಶ್ಯವಾಗಿ ಇರುತ್ತದೆ. ಆದರೆ ನಾಸಾಭೂಷಣ ಎನ್ನುವ ರೀತಿಯಲ್ಲಿಯೇ ಪ್ರಯೋಗವಿರುವದಿಲ್ಲ. ಯೌಗಿಕವಾದ ಶಬ್ದಗಳಿಂದ, ಪರೋಕ್ಷವಾಗಿ ತತ್ವವನ್ನು ತಿಳಿಸುವದು ವೇದಗಳ ಸ್ವಭಾವ. ಕಿವಿಯೋಲೆಯನ್ನು ವೇದಗಳು ಪತ್ರ ಎನ್ನುವ ಶಬ್ದದಿಂದ ಕರೆದಿವೆ. ಹೀಗಾಗಿ ಇದೇ ರೀತಿಯಲ್ಲಿ ಅವು ನಾಸಾಭೂಷಣವನ್ನು ಕರೆದಿರುತ್ತವೆ, ತಿಳಿಯುವಷ್ಟು ತಿಳುವಳಿಕೆ ನಮಗಿರಬೇಕಷ್ಟೆ.

ಋಗ್ವೇದದಲ್ಲಿ “ಅಚ್ಛಿನ್ನಪತ್ರಾಃ ಸಚಂತಾಮ್” ಎಂಬ ಒಂದು ಮಂತ್ರವಿದೆ. ಇಲ್ಲಿ ಅಚ್ಛಿನ್ನಪತ್ರಾಃ ಎನ್ನುವ ಶಬ್ದಕ್ಕೆ ಶ್ರೀಮದಾಚಾರ್ಯರು “ಯಸ್ಮಾದವಿಧವಾಃ ಸದಾ, ಅತೋ ಹ್ಯಚ್ಛಿನ್ನಪತ್ರಾಸ್ತಾಃ

---

[2] ಪ್ರತಿಬಿಂಬಕ್ಕೆ ವಿಶೇಷಣವಾಗಿ ಈ ಶ್ಲೋಕವಿರುವದರಿಂದ ಇಲ್ಲಿ ಪುಲ್ಲಿಂಗದ ಪ್ರಯೋಗವಿದೆ.

ಸದಾಯುಕ್ಕರ್ಣಭೂಷಣಾಃ” ಎಂದು ವ್ಯಾಖ್ಯಾನ ಮಾಡಿದ್ದಾರೆ.

ಹೀಗೆ ಅಚ್ಛಿನ್ನಪತ್ರಾಃ ಎನ್ನುವ ಶಬ್ದಕ್ಕೆ ಆಚಾರ್ಯರು ಕರ್ಣಭೂಷಣ ಕಿವಿಯೋಲೆ ಎಂದು ಅರ್ಥವನ್ನು ಮಾಡಿ ಅದು ಮಾಂಗಲ್ಯಗಳಲ್ಲಿ ಒಂದು, ಸದಾಕಾಲದಲ್ಲಿಯೂ ಮುತ್ತೈದೆಯರು ಧರಿಸಿರುತ್ತಾರೆ ಎನ್ನುವದನ್ನು ತಿಳಿಸುತ್ತಾರೆ. ಹೀಗೆ ವೇದಗಳಲ್ಲಿ ಯೌಗಿಕವಾದ ಶಬ್ದಗಳಿಂದ ನಾಸಾಭೂಷಣದ ಉಲ್ಲೇಖವೂ ಅವಶ್ಯವಾಗಿ ದೊರೆಯತ್ತದೆ.

ಹೀಗೆ ಕನ್ನಡದ ಕವಿಗಳಿಂದ ಆರಂಭಿಸಿ[3] ಸಂಸ್ಕೃತದ ಕವಿಗಳು, ದಾಸಸಾಹಿತ್ಯ, ಸ್ತೋತ್ರಸಾಹಿತ್ಯ, ಪುರಾಣಗಳು ಎಲ್ಲದರಲ್ಲಿಯೂ ಮೂಗುತಿಯ ಉಲ್ಲೇಖವಿದೆ. ಮುಸಲ್ಮಾನರು ನಮ್ಮ ದೇಶಕ್ಕೆ ಕಾಲಿಡಲಿಕ್ಕಂತೆ ಮುಂಚೆ ಹುಟ್ಟಿದ ಕವಿಗಳು ಮೂಗುತಿಯನ್ನು ವರ್ಣಿಸಿದ್ದಾರೆ. ವೇದವ್ಯಾಸದೇವರು ಪುರಾಣಗಳಲ್ಲಿ

---

[3] **ತಲಕುಸುಮವ ಸೇರ್ದ ನೀರ್ವನಿಯೆನ ಕಣ್ಣೊಳಿಸಿತು ನಾಸಾಭರಣ** — ನೇಮಿಜಿನೇಶಸಂಗತಿ, ೨೩ನೆಯ ಸಂಧಿ ೨೨೭ನೆಯ ಪದ್ಯ.

ನಾಸಾಮೌಕ್ತಿಕವನ್ನು ವರ್ಣಿಸಿದ್ದಾರೆ. **ದಾಸರು, ಶ್ರೀ ವಾದಿರಾಜರು, ವೇದವ್ಯಾಸದೇವರು, ಈ ಎಲ್ಲ ಜನ ಮುಸಲ್ಮಾನರ ಪ್ರಭಾವಕ್ಕೆ ಒಳಗಾದವರಾ?**

**"ನಾನು ಇನ್ನೊಬ್ಬರು ಓದಿರುವದನ್ನೂ ಓದಿದ್ದೇನೆ, ಓದದೇ ಇರುವದನ್ನೂ ಓದಿದ್ದೇನೆ" ಎಂದು ಬೀಗುವ ಬನ್ನಂಜೆ ಶ್ರೀ ವಾದಿರಾಜರು ರಚಿಸಿರುವ ಸ್ತೋತ್ರಗಳನ್ನಾದರೂ ಓದಿದ್ದಾರಾ? ಓದಿದ್ದರೆ ಹೀಗೆ ಮಾತನಾಡುತ್ತಿದ್ದರಾ?**

ಹಯಗ್ರೀವರೂಪದ ಪರಮಾತ್ಮ, ಸರಸ್ವತೀ ಭಾರತಿಯರು ಕೈಯಲ್ಲಿ ವೇದಗಳ ಪುಸ್ತಕಗಳನ್ನು ಹಿಡಿದಿದ್ದಾರೆ ಎಂದು ಸ್ವಯಂ ಶ್ರೀಮದಾಚಾರ್ಯರೇ ಹೇಳಿದ್ದಾರೆ. ಯಾವುದರಲ್ಲಿ ಗ್ರಂಥ ಲಿಪಿಯ ರೂಪದಲ್ಲಿರುತ್ತದೆಯೋ ಅದೇ ಪುಸ್ತಕ. ವೇದಗಳಿರುವದು ಸಂಸ್ಕೃತದಲ್ಲಿ. ಅಂದ ಮೇಲೆ ಸಂಸ್ಕೃತಕ್ಕೆ ಲಿಪಿಯಿದೆ ಎಂಬ ಸಾಮಾನ್ಯಜ್ಞಾನವೂ ಇಲ್ಲದ ಬನ್ನಂಜೆ ಬಡಬಡಿಸುತ್ತಾರೆ. ತಲೆಯಲ್ಲಿ ಬುದ್ಧಿ ಎನ್ನುವ ವಸ್ತು ಇಲ್ಲದೆ ಅವರು ಹೇಳಿದ್ದಕ್ಕೆಲ್ಲ ಜೈಕಾರ ಹಾಕುವ ಮಂದಿ ನಮ್ಮ ಬನ್ನಂಜೆ ಋಷಿ ಎಂದು ಬೀಗುತ್ತಾರೆ.

ನಹುಷ, ಕಾರ್ತವೀರ್ಯಾರ್ಜುನ, ಪಾಂಡವರು ಎಲ್ಲರೂ ಒಂದೇ ಪರಂಪರೆಯವರು. ಕ್ರಮವಾಗಿ ಇಪ್ಪತ್ತೆಂಟನೆಯ ಮಹಾಯುಗದ ಕೃತ-ತ್ರೇತಾ-ದ್ವಾಪರ ಯುಗಗಳಿಗೆ ಸೇರಿದವರು. ಕಾರ್ತವೀರ್ಯ ರಾವಣನನ್ನು ಸೋಲಿಸಿದ್ದ. ಆ ಕಾರ್ತವೀರ್ಯನನ್ನು ಪರಶುರಾಮ ಕೊಂದ. ರಾವಣನನ್ನು ರಾಮ ಕೊಂದ. ಅಂದ ಮೇಲೆ ಆ ನಾಲ್ಕೂ ಜನ ಇಪ್ಪತ್ತೆಂಟನೆಯ ತ್ರೇತಾಯುಗಕ್ಕೆ ಸೇರಿದವರು. ಆದರೆ ಬನ್ನಂಜೆ ಬರೆಯುತ್ತಾರೆ ಪರಶುರಾಮ ಹತ್ತೊಂಬತ್ತನೆಯ ದ್ವಾಪರದವನು, ರಾಮ ಇಪ್ಪತ್ತನಾಲ್ಕರವನು ಎಂದು. ರಾಮಾಯಣ ಯಾವಾಗ ನಡೆಯಿತು ಎಂಬ ಸಣ್ಣ ತಿಳುವಳಿಕೆಯೂ ಇಲ್ಲದ ಬನ್ನಂಜೆಯನ್ನು ರಾಮಾಯಣದ ಅಧಿಕೃತವಿದ್ವಾಂಸ ಎಂದು ಹೊಗಳುತ್ತಾರೆ, ತಲೆಯಲ್ಲಿ ಬುದ್ಧಿ ಎನ್ನುವ ವಸ್ತುವಿಲ್ಲದ ಮಂದಿ.

# ಮೂಗು ಚುಚ್ಚುವ ಸಂಸ್ಕಾರವಿದೆಯೇ ಎಂಬ ಪ್ರಶ್ನೆಗೆ ಉತ್ತರ

ಈ ಲೇಖನವನ್ನು ಬರೆದು ಪ್ರಕಟಿಸಿದ ಬಳಿಕ ವ್ಯಕ್ತಿಯೊಬ್ಬರು "ನಮ್ಮ ಬನ್ನಂಜೆ ಹೇಳಿರುವದು, ಮೂಗು ಚುಚ್ಚುವದು ಸಂಪ್ರದಾಯವಲ್ಲ ಎಂದು, ಮೂಗುತಿಯ ಬಗ್ಗೆ ಮಾತನಾಡಿಯೇ ಇಲ್ಲ, ಮೂಗನ್ನು ಚುಚ್ಚುವ  ಸಂಪ್ರದಾಯವಿದ್ದರೆ ಆ ಕುರಿತ ಸಂಸ್ಕಾರದ ಕ್ರಮಗಳನ್ನು ತಿಳಿಸಿಕೊಡಲಿ"  ಎಂದು ಪ್ರಶ್ನೆ ಮಾಡಿದ್ದಾರೆ.

ವಿಚಿತ್ರ ಜನ. ಮೂಗನ್ನು ಚುಚ್ಚದೇ, ಮೂಗುತಿಯ ಅಸ್ತಿತ್ವ ಹೇಗೆ ಇರಲು ಸಾಧ್ಯ. ನಾಟಕಗಳಲ್ಲಿ ಕೆಲಸ ಮಾಡುವ ಜನರಂತೆ ನಮ್ಮ ಹೆಣ್ಣುಮಕ್ಕಳೆಲ್ಲ ಮೂಗಿಗೆ ಮೂಗುತಿ ಅಂಟಿಸಿಕೊಂಡು ಓಡಾಡುತ್ತಾರೇನು?

ಇನ್ನು ಸಂಸ್ಕಾರದ ಕುರಿತು. ಧರ್ಮಶಾಸ್ತ್ರಗಳು ಸಂಸ್ಕಾರವನ್ನು ತಿಳಿಸಬೇಕಾದರೆ ಮಂತ್ರಪುರಸ್ಸರವಾಗಿ ತಿಳಿಸಬೇಕು. ಹೆಣ್ಣುಮಕ್ಕಳಿಗೆ ಮದುವೆಯೇ ಉಪನಯನ. ಅದು

ಆಗುವವರೆಗೆ ಯಾವ ಸಂಸ್ಕಾರವೂ ಮಂತ್ರಪುರಸ್ಸರವಾಗಿ ನಡೆಯುವದಿಲ್ಲ. ಹೀಗಾಗಿ ಮಂತ್ರದ ಉಪಯೋಗವೇ ಇಲ್ಲವಾದ ಬಳಿಕ ಅದನ್ನು ತಿಳಿಸಲು ಸಂಸ್ಕಾರವನ್ನು ಹೇಗೆ ರೂಪಿಸಲು ಸಾಧ್ಯ?

ಹೆಣ್ಣುಮಕ್ಕಳು ಮೈನೆರೆದ ಹದಿನಾರನೆಯ ದಿವಸ ಉತ್ಸವದ ಆಚರಣೆಯಿದೆ. ಅವರಿಗೆ ಆರತಿಯಿದೆ. ಅದರ ಉಲ್ಲೇಖ ಧರ್ಮಶಾಸ್ತ್ರಗಳಲ್ಲಿ ಎಲ್ಲಿದೆ? ಅಷ್ಟೇಕೆ, ಮದುವೆಯಲ್ಲಿ, ಮುಂಜಿಯಲ್ಲಿ ಚಪ್ಪರ ಹಾಕಿ ಪೂಜೆ ಮಾಡುತ್ತೇವೆ. ಅದರ ವಿಧಿವಿಧಾನಗಳ ಉಲ್ಲೇಖ ಯಾವ ಧರ್ಮಶಾಸ್ತ್ರದಲ್ಲಿದೆ. ಹಾಗಂತ ಅದನ್ನು ಮಾಡಬಾರದೇನು? ಅವಶ್ಯವಾಗಿ ಮಾಡಬೇಕು. ಚಪ್ಪರದ ಉಲ್ಲೇಖ ಧರ್ಮಶಾಸ್ತ್ರದಲ್ಲಿ ಇದ್ದೇ ಇದೆ. ಆದರೆ ಮಂತ್ರಗಳಿಲ್ಲ.  ಮುತ್ತೈದೆಯರ ಜೊತೆಯಲ್ಲಿ ವಧುವರರ ತಂದೆ ತಾಯಿಯರು ಚಪ್ಪರದ ಪೂಜೆಯನ್ನು ಮಾಡುತ್ತಾರೆ.

ಹಾಗೆ, ಮೂಗುತಿಯ ಉಲ್ಲೇಖ ಶಾಸ್ತ್ರಗಳಲ್ಲಿ  ಇದೆ ಎನ್ನುವದಕ್ಕೆ ವಿಪುಲ ಪ್ರಮಾಣಗಳನ್ನು

ಒದಗಿಸಿದ್ದೇನೆ. ತಾಯಿಯಾದವಳು ಐದು ಜನ ಮುತ್ತೈದೆಯರ ಜೊತೆಗೂಡಿ ಅಕ್ಕಸಾಲಿಗನ ಮನೆಗೆ ಹೆಣ್ಣುಮಗಳನ್ನು ಕರೆದುಕೊಂಡು ಹೋಗಿ, ಅಕ್ಕಸಾಲಿಗನಿಗೆ ಗೌರವವನ್ನು ಮಾಡಿ, ಅವನು ಚುಚ್ಚಲು ಉಪಯೋಗಿಸುವ ಬಂಗಾರದ ಕಡ್ಡಿಗೆ ಅರಿಶಿನ ಕುಂಕುಮದ ಪೂಜೆಯನ್ನು ಸಲ್ಲಿಸಿ, ಇವಳಿಗೆ ಸದಾ ಸೌಭಾಗ್ಯವಿರಲಿ ಎಂದು ಋಷಿಸ್ತ್ರೀಯರನ್ನು ದೇವತಾಸ್ತ್ರೀಯರನ್ನು ಪ್ರಾರ್ಥಿಸಿ ಮೂಗನ್ನು ಚುಚ್ಚಿಸುತ್ತಾಳೆ. ಮೂಗು ಚುಚ್ಚಿಸಿಕೊಳ್ಳುವಾಗ ಒಣಕೊಬ್ಬರಿಯನ್ನು ತಿನ್ನಲು ಮಗಳಿಗೆ ನೀಡಬೇಕು. ಗಟ್ಟಿಯಾದ ಒಣಕೊಬ್ಬರಿಯನ್ನು ಕಚ್ಚಿ ಹಿಡಿಯುವದರಿಂದ ಆ ನೋವನ್ನು ತಡೆಯಲು ಸಾಧ್ಯವಾಗುತ್ತದೆ. ಚುಚ್ಚಿದ ನಂತರ ಮುತ್ತೇದೆಯರಿಗೆ ನಮಸ್ಕಾರ ಮಾಡಿ ಆಶೀರ್ವಾದವನ್ನು ಪಡೆಯಬೇಕು. ಇಷ್ಟೇ ಕ್ರಮ. ಹೆಣ್ಣುಮಕ್ಕಳೇ ನಿಂತು ನಡೆಸುವ ಕ್ರಿಯೆಯಾದ್ದರಿಂದ ಇಲ್ಲಿ ಮಂತ್ರಗಳಿಲ್ಲ. ಅದಕ್ಕಾಗಿಯೇ ಧರ್ಮಶಾಸ್ತ್ರಗಳಲ್ಲಿ ಉಲ್ಲೇಖಿಸುವ ಪ್ರಸಕ್ತಿಯೇ ಇಲ್ಲ.

ಶ್ರೀಮದಾಚಾರ್ಯರು ಯಾತ್ರೆಗೈದು ದರ್ಶನ ಪಡೆದ, ಶ್ರೀಮದ್ವಾದಿರಾಜಗುರುಸಾರ್ವಭೌಮರು ಸ್ತೋತ್ರ ಮಾಡಿ ನಮಿಸಿದ ಕನ್ಯಾಕುಮಾರಿಯ ದೇವಸ್ಥಾನದಲ್ಲಿನ ದುರ್ಗಾದೇವಿಯ ಮೂಗಿನ ವಜ್ರದ ಮೂಗುತಿಯ ಮಾಹಾತ್ಮ್ಯ ಆಸ್ತಿಕ ಭಾರತೀಯರಿಗಷ್ಟೇ ಅಲ್ಲ, ಆ ಪ್ರದೇಶದಲ್ಲಿ ಸಮುದ್ರಯಾನ ಮಾಡಿದ  ಪಾಶ್ಚಾತ್ಯರಿಗೂ ತಿಳಿದಿದೆ. ಇತಿಹಾಸದ ಪುಸ್ತಕಗಳಲ್ಲಿಯೂ ದಾಖಲಾಗಿದೆ.

ಬ್ರಿಟೀಷರ ಚಾಲಾಕಿತನದಿಂದ ಈಗಾಗಲೇ ನಮ್ಮ ಜನರೇ ನಮ್ಮ ಸಂಸ್ಕೃತಿಯಿಂದ ದೂರಾಗುತ್ತಿದ್ದಾರೆ. ಅನೇಕ ಸಜ್ಜನರು ನಮ್ಮ ಸಂಸ್ಕೃತಿಯ ಕಡೆಗೆ ಯುವಕ ಯುವತಿಯರನ್ನು ಕರೆತರಲು ಪ್ರಯತ್ನ ಪಡುತ್ತಿದ್ದಾರೆ. ಆಚರಿಸುವ ಜನರೂ ತಿಳಿದು ಆಚರಿಸಬೇಕು ಎಂದು ಬಯಸಿ, ಬನ್ನಂಜೆಯನ್ನು ಪ್ರಶ್ನೆ ಮಾಡಿದರೆ ಈ ರೀತಿ ಉತ್ತರ ನೀಡುವದು ಬನ್ನಂಜೆಗೆ ಶೋಭೆಯಾ? ಹೆಣ್ಣುಮಕ್ಕಳು ಮೂಗುತಿ ಧರಿಸಬಾರದು, ಕುಪ್ಪುಸ ಹಾಕಬಾರದು ಎಂದು ತನ್ನ ತಲೆಗೆ ತೋಚಿದ್ದನ್ನೆಲ್ಲ ಶಾಸ್ತ್ರ ಎಂದು ಹೇಳಿದರೆ ಸಮಾಜದ ದಾರಿ ತಪ್ಪಿಸದಂತಾಗುವದಿಲ್ಲವಾ?

ಇಡಿಯ ಸಮಾಜ ತಪ್ಪು ಮಾಡಿದರೆ ತಿದ್ದಬೇಕಾದ್ದು ಪಂಡಿತರ ಕರ್ತವ್ಯ. ಅಂತಹುದರಲ್ಲಿ ಸಮಾಜದಲ್ಲಿ ಅಳಿದುಳಿದಿರುವ ಆಚಾರ ವಿಚಾರಗಳನ್ನೂ ತನ್ನ ಅಜ್ಞಾನ ದುರಂಹಕಾರಗಳಿಂದ ಪಂಡಿತರ ಸ್ಥಾನದಲ್ಲಿರುವವರೇ ಅಲ್ಲಗಳೆಯುವದು ಖಂಡನೀಯ.

ಅದಕ್ಕಾಗಿಯೇ ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491